International Journal of Kannada Research
www.kannadajournal.com

ISSN: 2454–5813
IJKR 2020; 6(1): 102-106
© 2020 IJKR
www.kannadajournal.com
Received: 25-11-2019
Accepted: 27-12-2019

**ಶ್ರೀನಿವಾಸ ಮಾಣಿಕರಾವ್ ಮತ್ತು**
ಸಂಶೋಧನಾ ವಿದ್ಯಾರ್ಥಿ, ಶಿಕ್ಷಣ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಗುಲಬರ್ಗ ವಿಶ್ವವಿದ್ಯಾನಿಲಯ, ಕಲಬುರಗಿ

**ಡಾ. ಡಿ.ಹೆಚ್. ಜಗದೀಶ**
ಸಂಶೋಧನಾ ಮಾರ್ಗದರ್ಶಕರು ಹಾಗೂ ನಿವೃತ್ತ ಪ್ರಾಚಾರ್ಯರು ನಂದಿನಿ ಶಿಕ್ಷಣ ಮಹಾವಿದ್ಯಾಲಯ, ರಾಯಚೂರು

**Corresponding Author:**
**ಶ್ರೀನಿವಾಸ ಮಾಣಿಕರಾವ್ ಮತ್ತು**
ಸಂಶೋಧನಾ ವಿದ್ಯಾರ್ಥಿ, ಶಿಕ್ಷಣ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಗುಲಬರ್ಗ ವಿಶ್ವವಿದ್ಯಾನಿಲಯ, ಕಲಬುರಗಿ

# ಸ್ನಾತಕ ಪದವಿ ಹಂತದ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕರು ಹಾಗೂ ಸ್ವಯಂ ಸೇವಕರಲ್ಲದ ವಿದ್ಯಾರ್ಥಿಗಳ ನಡುವಿನ ಸಾಮಾಜಿಕ ಅಭಿವೃತ್ತಿಯ ಹೋಲಿಕಾ ಅಧ್ಯಯನ

**ಶ್ರೀನಿವಾಸ ಮಾಣಿಕರಾವ್ ಮತ್ತು, ಡಾ. ಡಿ.ಹೆಚ್. ಜಗದೀಶ**

**ಅಧ್ಯಯನದ ಸಾರಾಂಶ**
ಸ್ನಾತಕ ಪದವಿ ಹಂತದ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕರು ಮತ್ತು ಸ್ವಯಂ ಸೇವಕರಲ್ಲದ ವಿದ್ಯಾರ್ಥಿಗಳ ನಡುವಿನ ಸಾಮಾಜಿಕ ಅಭಿವೃತ್ತಿಯ ಹೋಲಿಕಾ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಈ ಅಧ್ಯಯನದ ಉದ್ದೇಶ – ಸ್ನಾತಕ ಪದವಿ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿ ಅಧ್ಯಯನ ಮಾಡುವುದು, ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕರು ಮತ್ತು ಸ್ವಯಂ ಸೇವಕರಲ್ಲದ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿಯನ್ನು ಹೋಲಿಸುವುದು, ಪುರುಷ–ಮಹಿಳೆ, ನಗರ–ಗ್ರಾಮೀಣ ಹಾಗೂ ಅನುದಾನಿತ–ಅನುದಾನರಹಿತ ಹಾಗೂ ಸರಕಾರಿ ಕಾಲೇಜಿನ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿಯನ್ನು ಹೋಲಿಸಿ ನೋಡಲಾಗಿದೆ. ಸಂಶೋಧಕರು ಸಮೀಕ್ಷಾ ವಿಧಾನದ ಮೂಲಕ ಮಾಹಿತಿ ಸಂಗ್ರಹಿಸಿ ಸಾಮಾಜಿಕ ಅಭಿವೃತ್ತಿಗೆ ಸಂಬಂಧಿಸಿದಂತೆ ವಿವಿಧ ಗುಂಪುಗಳನ್ನು ಹೋಲಿಕೆ ಮಾಡಿರುತ್ತಾರೆ. ಈ ಅಧ್ಯಯನಕ್ಕೆ ಗುಲಬರ್ಗಾ ವಿಶ್ವವಿದ್ಯಾನಿಲಯ ವ್ಯಾಪ್ತಿಯ 4 ಜಿಲ್ಲೆಗಳ ಪದವಿ ಕಾಲೇಜುಗಳಿಂದ 500 ಸ್ವಯಂಸೇವಕರು ಮತ್ತು ಸ್ವಯಂಸೇವಕರಲ್ಲದ 500 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಡಾ. ಜಾನ್ಸನ್‌ರವರು ರೂಪಿಸಿ ಪ್ರಮಾಣಬದ್ಧಗೊಳಿಸಿರುವ ಸಾಮಾಜಿಕ ಅಭಿವೃತ್ತಿ ಮಾಪನವನ್ನು ದತ್ತಾಂಶ ಸಂಗ್ರಹಣೆಗೆ ಬಳಸಿಕೊಳ್ಳಲಾಗಿದೆ. 'ಟಿ' ಪರೀಕ್ಷೆ ಹಾಗೂ ಒಂದು ಮಾರ್ಗದ ಅನೋವಾ ಪರೀಕ್ಷೆ ಬಳಸಿ ದತ್ತಾಂಶವನ್ನು ವಿಶ್ಲೇಷಿಸಲಾಗಿದೆ. ಈ ಅಧ್ಯಯನದಲ್ಲಿ ಕಂಡುಬಂದ ಫಲಿತಾಂಶಗಳು – ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕರು ಮತ್ತು ಸ್ವಯಂ ಸೇವಕರಲ್ಲದ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಸಾಮಾಜಿಕ ಅಭಿವೃತ್ತಿ ಹೊಂದಿರುತ್ತಾರೆ. ಮಹಿಳಾ ಮತ್ತು ಪುರುಷ ವಿದ್ಯಾರ್ಥಿಗಳ ನಡುವೆ ಯಾವುದೇ ವ್ಯತ್ಯಾಸ ಕಂಡುಬರುವುದಿಲ್ಲ. ನಗರ ಪ್ರದೇಶದ ಸ್ನಾತಕ ಪದವಿ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಸಾಮಾಜಿಕ ಅಭಿವೃತ್ತಿ ಹೊಂದಿರುತ್ತಾರೆ. ಅನುದಾನಿತ ಹಾಗೂ ಅನುದಾನ ರಹಿತ ಕಾಲೇಜಿನ ವಿದ್ಯಾರ್ಥಿಗಳು ಸರಕಾರಿ ಕಾಲೇಜು ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಸಾಮಾಜಿಕ ಅಭಿವೃತ್ತಿ ಹೊಂದಿರುತ್ತಾರೆ. ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ತೊಡಗಿರುವ ವಿದ್ಯಾರ್ಥಿಗಳು ಹೆಚ್ಚಿನ ಸಾಮಾಜಿಕ ಅಭಿವೃತ್ತಿ ಹೊಂದಿರುವುದರಿಂದ ಸಮಾಜ ಸೇವೆಯಲ್ಲಿ ಹೆಚ್ಚಾಗಿ ತೊಡಗಿಕೊಳ್ಳುತ್ತಿದ್ದಾರೆ.

**ಪೀಠಿಕೆ:** ರಾಷ್ಟ್ರೀಯ ಸೇವಾ ಯೋಜನೆಯು ಶಿಕ್ಷಣ ಕ್ಷೇತ್ರದಲ್ಲಿ ಪ್ರಾರಂಭವಾಗಿರುವ ಕೇಂದ್ರ ಸರ್ಕಾರದ ಒಂದು ಯೋಜನೆಯಾಗಿದೆ. 1969ರಲ್ಲಿಯೇ ಕಾರ್ಯರಂಭ ಮಾಡಿರುವ ಈ ಯೋಜನೆಯು 40 ವರ್ಷಗಳನ್ನು ಕಳೆದಿದೆ, ಇದು ವಿದ್ಯಾರ್ಥಿಗಳ ವ್ಯಕ್ತಿತ್ವ ನಿರ್ಮಾಣದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.ರಾಷ್ಟ್ರೀಯ ಸೇವಾ ಯೋಜನೆಯು ಸ್ನಾತಕ ಪದವಿ ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವ, ಶಿಸ್ತು, ಸಂಯಮ, ಉತ್ತಮ ನಾಯಕತ್ವದ ಗುಣ, ವೃತ್ತಿಗೌರವ, ಸಹಬಾಳ್ವೆ, ಭ್ರಾತೃತ್ವ, ಉತ್ತಮ ಧ್ಯೇಯ ಹಾಗೂ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಸಹಕಾರಿಯಾಗಿದೆ. ಅಲ್ಲದೆ ಇದು ಅನುಭವದ ಮೂಲಕ ಶಿಕ್ಷಣ ನೀಡುವುದಾಗಿದೆ.

ರಾಷ್ಟ್ರೀಯ ಸೇವಾ ಯೋಜನೆಗೆ ಅತಿ ಮುಖ್ಯವಾದ ಎರಡು ಉದ್ದೇಶಗಳಿವೆ. ಅವುಗಳೆಂದರೆ ಮೊದಲನೆಯದು, ಯೋಜನೆಯ ಮೂಲಕ ವಿದ್ಯಾರ್ಥಿಯ ವ್ಯಕ್ತಿತ್ವವನ್ನು ರೂಪಿಸಿ ಅವನನ್ನು/ಅವಳನ್ನು

ಸತ್ಪ್ರಜೆಯನ್ನಾಗಿ ಮಾಡುವುದು ಹೀಗಾಗಿ ಇದೊಂದು ಶೈಕ್ಷಣಿಕ ಚಟುವಟಿಕೆ.ಎರಡನೆಯದು ಸೇವೆಯ ಮೂಲಕ ಸಮಾಜದ ಅಭಿವೃದ್ಧಿಗೆ ಪ್ರಯತ್ನಿಸುವುದು, ಅಂದರೆ ಸಮಾಜ ಸೇವೆ ಇದರ ಇನ್ನೊಂದು ಮುಖ.

**ಅಧ್ಯಯನದ ಅಗತ್ಯತೆ ಮತ್ತು ಪ್ರಾಮುಖ್ಯತೆ:**
ಸಾಂಪ್ರದಾಯಿಕ ಶಿಕ್ಷಣ ಒಂದರಿಂದಲೇ ಸಮಾಜದಲ್ಲಿರುವ ಎಲ್ಲಾ ಸವಾಲುಗಳನ್ನು ಎದುರಿಸಲು ಸಾಧ್ಯವಿಲ್ಲ ಎಂಬ ಅರಿವು ಶಿಕ್ಷಣದ ಬಗ್ಗೆ ಆಸಕ್ತಿ ಇರುವ ಸರ್ವರಿಗೂ ತಿಳಿದ ವಿಷಯವಾಗಿದೆ.ಸಮಾಜದ ನೇರ ಸಂಪರ್ಕವನ್ನು ಪಡೆದಾಗ ಸಮಾಜದ ನೋವು ನಲಿವುಗಳಿಗೆ ಸ್ಪಂದಿಸುವುದು ಮತ್ತು ಜೀವನದ ಮೌಲ್ಯಗಳನ್ನು ಎತ್ತಿ ಹಿಡಿಯುವ ಪ್ರವೃತ್ತಿ ಬೆಳೆಯುತ್ತದೆ.ಈ ದಿಶೆಯಲ್ಲಿ ಶಿಕ್ಷಣ ಕ್ಷೇತ್ರದ ಹಲವು ಸಮಸ್ಯೆಗಳಿಗೆ ರಾಷ್ಟ್ರೀಯ ಸೇವಾ ಯೋಜನೆ ಉತ್ತರ ನೀಡಬಲ್ಲದು ಹಾಗೂ ಸಮಾಜದ ವಿವಿಧ ಸಮಸ್ಯೆಗಳಿಗೆ ಈ ಯೋಜನೆಯ ಮೂಲಕ ಪರಿಹಾರವನ್ನು ಕಂಡುಕೊಳ್ಳಬಹುದಾಗಿದೆ.
ಪದವಿ ಹಂತದ ವಿದ್ಯಾರ್ಥಿಗಳಲ್ಲಿರುವ ಅಧಮ್ಯವಾದ ಬುದ್ಧಿಶಕ್ತಿ, ಬಲ, ಆದರ್ಶ ಹಾಗೂ ಉತ್ಸಾಹಗಳನ್ನು ಬಳಸಿಕೊಂಡು ಅವರನ್ನು ಕ್ರಿಯಾತ್ಮಕವಾಗಿ ಸಮಾಜ ಕಾರ್ಯಗಳಲ್ಲಿ ತೊಡಗಿಸುವುದು ರಾ.ಸೇ.ಯೋಜನೆಯ ಪ್ರಮುಖ ಗುರಿಯಾಗಿದೆ. ವಿದ್ಯಾರ್ಥಿಯ ಸುಪ್ತ ಸಾಮರ್ಥ್ಯಗಳನ್ನು ಉಳಿಸಿ, ಬೆಳೆಸುವುದರ ಜೊತೆಗೆ ಅವರಲ್ಲಿರುವ ಒರೆ ಕೋರೆಗಳನ್ನು ತಿದ್ದಲು ಇದು ಸಾಧನವಾಗುತ್ತದೆ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಕಾಣಬಹುದಾದ ಅಶಾಂತಿ, ಕ್ಷೋಭೆ ಮುಂತಾದವುಗಳು ಬಹುತೇಕ ಅರಿವು ಮತ್ತು ಮಾರ್ಗದರ್ಶನದ ಕೊರತೆಯಿಂದ ಉಂಟಾದ ದುಷ್ಪರಿಣಾಮಗಳು, ವಿದ್ಯಾರ್ಥಿಗಳು ಈ ಯೋಜನೆಯಲ್ಲಿ ಸಕ್ರಿಯವಾಗಿ ತೊಡಗಿದರೆ ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಸಮಸ್ಯೆಗಳು ಕಡಿಮೆಯಾಗುತ್ತವೆ. ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿಗಳು ಸಾಮಾನ್ಯ ವಿದ್ಯಾರ್ಥಿಗಳಿಗಿಂತ ಭಿನ್ನವಾಗಿ ವರ್ತಿಸುವುದನ್ನು ನಾವು ಕಾಣುತ್ತೇವೆ.
ಪದವಿ ಹಂತದ ವಿದ್ಯಾರ್ಥಿಗಳು ಧನಾತ್ಮಕ ಸಾಮಾಜಿಕ ಅಭಿವೃತ್ತಿಯನ್ನು ಬೆಳೆಸಿಕೊಂಡಾಗ ಮಾತ್ರ ಅವರು ಸ್ವಯಂ ಪ್ರೇರಿತರಾಗಿ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಬಲ್ಲರು ಮತ್ತು ರಾ.ಸೇ.ಯೋಜನೆಯ ಸ್ವಯಂ ಸೇವಕರಾಗಿ ಕಾರ್ಯಪ್ರವೃತ್ತರಾಗಲು ಮುಂದಾಗುತ್ತಾರೆ. ರಾ.ಸೇ.ಯೋಜನೆಯು ವಿದ್ಯಾರ್ಥಿಗಳ ಮೇಲೆ ಮತ್ತು ಸಮಾಜದ ಮೇಲೆ ಧನಾತ್ಮಕ ಪ್ರಭಾವ ಬೀರಿದ್ದರೂ ಸಹ ಈ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆಗಳಾಗಿಲ್ಲ, ಈ ಕ್ಷೇತ್ರದಲ್ಲಿ ಸಾರ್ವತ್ರಿಕವಾಗಿ ಹೆಚ್ಚು ಹೆಚ್ಚು ಸಂಶೋಧನೆಗಳು ಆಗುವುದರಿಂದ ರಾ.ಸೇ.ಯೋಜನೆಯಲ್ಲಿ ಫಲಪ್ರದವಾದ ಕಾರ್ಯಕ್ರಮಗಳನ್ನು ಯೋಜಿಸಲು, ಅವುಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಾಗುತ್ತದೆ. ಇದರಿಂದ ವಿದ್ಯಾರ್ಥಿ ಸಮುದಾಯ ಹಾಗೂ ಸಮಾಜಕ್ಕೆ ಹೆಚ್ಚಿನ ಅನುಕೂಲಗಳು ದೊರೆಯುತ್ತವೆ. ಈ ಹಿನ್ನೆಲೆಯಲ್ಲಿ ಸಂಶೋಧಕರು ಪದವಿ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವುದರಿಂದ ರಾ.ಸೇ.ಯೋಜನೆಯ ಸ್ನಾತಕ ಪದವಿಯ ಸ್ವಯಂ ಸೇವಕರು ಮತ್ತು ಸ್ವಯಂ ಸೇವಕರಲ್ಲದ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಅಭಿವೃತ್ತಿಯನ್ನು ಪರೀಕ್ಷಿಸಿ, ಅದಕ್ಕೆ ಸೂಕ್ತ ಸಲಹೆಗಳನ್ನು ನೀಡುವ ಹಿನ್ನೆಲೆಯಲ್ಲಿ ಹೋಲಿಕಾ ಅಧ್ಯಯನವನ್ನು ಕೈಗೊಂಡಿರುತ್ತಾರೆ.

**ಸಮಸ್ಯೆಯ ನಿರೂಪಣೆ:** ಸ್ನಾತಕ ಪದವಿ ಹಂತದ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕರು ಮತ್ತು ಸ್ವಯಂಸೇವಕರಲ್ಲದ ವಿದ್ಯಾರ್ಥಿಗಳ ನಡುವಿನ ಸಾಮಾಜಿಕ ಅಭಿವೃತ್ತಿಯ ಹೋಲಿಕಾ ಅಧ್ಯಯನ.

**ಉದ್ದೇಶಗಳು**
1. ಸ್ನಾತಕ ಪದವಿ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿಯ ಬಗ್ಗೆ ಅಧ್ಯಯನ ಮಾಡುವುದು.
2. ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕರು ಮತ್ತು ಸ್ವಯಂ ಸೇವಕರಲ್ಲದ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿಯನ್ನು ಹೋಲಿಸುವುದು.
3. ಪುರುಷ ಮತ್ತು ಮಹಿಳಾ ಸ್ನಾತಕ ಪದವಿ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿಯನ್ನು ಹೋಲಿಸುವುದು.
4. ಗ್ರಾಮೀಣ ಹಾಗೂ ನಗರ ಪ್ರದೇಶದ ಸ್ನಾತಕ ಪದವಿ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿಯನ್ನು ಹೋಲಿಸುವುದು.
5. ಅನುದಾನಿತ, ಅನುದಾನರಹಿತ ಮತ್ತು ಸರಕಾರಿ ಕಾಲೇಜಿನ ಸ್ನಾತಕ ಪದವಿ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿಯನ್ನು ಹೋಲಿಸುವುದು.

**ಚಲಕಗಳು**
1. ಸಾಮಾಜಿಕ ಅಭಿವೃತ್ತಿ
2. ರಾ.ಸೇ. ಯೋಜನೆಯ ಸ್ವಯಂ ಸೇವಕರು ಮತ್ತು ಸ್ವಯಂಸೇವಕರಲ್ಲದ ಸ್ನಾತಕ ಪದವಿ ವಿದ್ಯಾರ್ಥಿಗಳು
3. ಲಿಂಗ– ಪುರುಷ ಮತ್ತು ಮಹಿಳೆ
4. ಪ್ರಾದೇಶಿಕತೆ – ನಗರ ಮತ್ತು ಗ್ರಾಮೀಣ
5. ಕಾಲೇಜಿನ ವಿಧ – ಅನುದಾನಿತ, ಅನುದಾನ ರಹಿತ ಮತ್ತು ಸರಕಾರಿ ಕಾಲೇಜುಗಳು.

**ಪ್ರಾಕಲ್ಪನೆಗಳು:** ಅಧ್ಯಯನದ ಉದ್ದೇಶಗಳನ್ನಾಧರಿಸಿ ಈ ಕೆಳಕಂಡ ಪ್ರಾಕಲ್ಪನೆಗಳನ್ನು ರೂಪಿಸಿಕೊಳ್ಳಲಾಗಿದೆ.
1. ಸ್ನಾತಕ ಪದವಿ ವಿದ್ಯಾರ್ಥಿಗಳಲ್ಲಿ ರಾ.ಸೇ.ಯೇಜನೆಯ ಸ್ವಯಂ ಸೇವಕರು ಮತ್ತು ಸ್ವಯಂ ಸೇವಕರಲ್ಲದ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿ ಅಂಕಗಳ ನಡುವೆ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ.
2. ಪುರುಷ ಮತ್ತು ಮಹಿಳಾ ಸ್ನಾತಕ ಪದವಿ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿ ಅಂಕಗಳ ನಡುವೆ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ.
3. ಗ್ರಾಮೀಣ ಮತ್ತು ನಗರ ಪ್ರದೇಶದ ಸ್ನಾತಕ ಪದವಿ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿ ಅಂಕಗಳ ನಡುವೆ ಯಾವುದೇ ಮಹತ್ವ ಪೂರ್ಣ ವ್ಯತ್ಯಾಸ ಕಂಡು ಬರುವುದಿಲ್ಲ.
4. ಅನುದಾನಿತ, ಅನುದಾನ ರಹಿತ ಮತ್ತು ಸರಕಾರಿ ಕಾಲೇಜುಗಳ ಸ್ನಾತಕ ಪದವಿ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿ ಅಂಕಗಳ ನಡುವೆ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ.

**ಸಂಶೋಧನಾ ವಿಧಾನ:** ಪ್ರಸ್ತುತ ಅಧ್ಯಯನದಲ್ಲಿ ಸಂಶೋಧಕರು ವಿವರಣಾ ಸಂಶೋಧನಾ ವಿಧಾನ ಬಳಸಿಕೊಂಡಿದ್ದಾರೆ. ಇದರಲ್ಲಿ ಸಮೀಕ್ಷಾ ವಿಧಾನದ ಮೂಲಕ ಮಾಹಿತಿ ಸಂಗ್ರಹಿಸಿ ಸಾಮಾಜಿಕ ಅಭಿವೃತ್ತಿಗೆ ಸಂಬಂಧಿಸಿದಂತೆ ವಿವಿಧ ಗುಂಪುಗಳ ಹೋಲಿಕೆ ಮಾಡಲಾಗಿದೆ.

**ಪ್ರತಿದರ್ಶದ ಆಯ್ಕೆ:** ಗುಲಬರ್ಗಾ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಗುಲಬರ್ಗಾ, ಬೀದರ್, ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಸ್ನಾತಕ ಪದವಿ ಮಹಾವಿದ್ಯಾಲಯಗಳಲ್ಲಿ ಅಧ್ಯಯನ ಮಾಡುತ್ತಿರುವ ರಾಷ್ಟ್ರೀಯ ಸೇವಾ ಯೋಜನೆಯ 500 ಸ್ವಯಂ ಸೇವಕರು ಮತ್ತು ಸ್ವಯಂ

ಸೇವಕರಲ್ಲದ 500 ವಿದ್ಯಾರ್ಥಿಗಳನ್ನು ಒಟ್ಟು 1000 ವಿದ್ಯಾರ್ಥಿಗಳನ್ನು ಸ್ತರೀಕೃತ ಯಾದೃಚ್ಛಿಕ ಪ್ರತಿಚಯನ ವಿಧಾನದಿಂದ ಆಯ್ಕೆ ಮಾಡಿಕೊಂಡಿರುತ್ತಾರೆ.

**ದತ್ತಾಂಶ ಸಂಗ್ರಹಣೆಗೆ ಬಳಸಿದ ಸಾಧನಗಳು**

1. ಸಾಮಾಜಿಕ ಅಭಿವೃತ್ತಿ ಮಾಪನ
2. ವೈಯಕ್ತಿಕ ಮಾಹಿತಿಯ ಪ್ರಶ್ನಾವಳಿ

ಅಧ್ಯಯನದಲ್ಲಿ ಬಳಸಿರುವ ಸಾಮಾಜಿಕ ಅಭಿವೃತ್ತಿ ಮಾಪನವನ್ನು ಡಾ.ಜಾನ್ಸನ್ ರವರು ರೂಪಿಸಿರುತ್ತಾರೆ. ಪ್ರಸ್ತುತ ಮಾಪನಿಯಲ್ಲಿ 30 ಹೇಳಿಕೆಗಳಿವೆ. ಪ್ರತಿಯೊಂದು ಹೇಳಿಕೆಯ ಮುಂದೆ ಎ.ಬಿ.ಸಿ.ಡಿ.ಇ. ಎಂಬ ಐದು ಆಯ್ಕೆಗಳಿವೆ. ಇವುಗಳಲ್ಲಿ ಸೂಕ್ತವಾದ ಉತ್ತರವನ್ನು ಆಯ್ದು ಆ ಅಕ್ಷರದ ಸುತ್ತ ವೃತ್ತ ಹಾಕುವ ಮೂಲಕ ತಮ್ಮ ಪ್ರತಿಕ್ರಿಯೆ ನೀಡಲು ಅವಕಾಶ ನೀಡಲಾಗಿದೆ. ಈ ಮಾಪನವನ್ನು ಸಂಶೋಧಕರು ಕನ್ನಡಕ್ಕೆ ಭಾಷಾಂತರಿಸಿ ಅದನ್ನು ಚಿಕ್ಕ ಗುಂಪಿನ ಮೇಲೆ ಪ್ರಯೋಗಿಸಿ ಸಮಂಜಸತೆಯನ್ನು ಕಂಡುಕೊಂಡಿರುತ್ತಾರೆ. ಈ ಮಾಪನಿಯ ಕನ್ನಡ ಅವೃತ್ತಿಯನ್ನು ಬಳಸಿ ಸ್ನಾತಕ ಪದವಿ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿಯನ್ನು ಅಳೆಯಲಾಗಿದೆ. ವೈಯಕ್ತಿಕ ಮಾಹಿತಿಯ ಪ್ರಶ್ನಾವಳಿಯನ್ನು ಬಳಸಿ ಸ್ನಾತಕ ಪದವಿ ವಿದ್ಯಾರ್ಥಿಗಳಲ್ಲಿ ಸ್ವಯಂಸೇವಕರ ವಿಧ, ಲಿಂಗ, ಪ್ರಾದೇಶಿಕತೆ ಹಾಗೂ ಅವರು ಅಧ್ಯಯನ ಮಾಡುವ ಕಾಲೇಜಿನ ವಿಧಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ.

**ದತ್ತಾಂಶ ವಿಶ್ಲೇಷಣೆಗೆ ಬಳಸಿದ ಸಂಖ್ಯಾ ಶಾಸ್ತ್ರೀಯ ತಂತ್ರಗಳು**

ವಿವಿಧ ಗುಂಪುಗಳಲ್ಲಿರುವ ಸಾಮಾಜಿಕ ಅಭಿವೃತ್ತಿ ಅಂಕಗಳ ವ್ಯತ್ಯಾಸಗಳನ್ನು ಹೋಲಿಸಿ ನೋಡಲು ಸ್ವತಂತ್ರ, 'ಟಿ' ಪರೀಕ್ಷೆ ಮತ್ತು ಒಂದು ಮಾರ್ಗದ ಅನೋವಾಗಳನ್ನು ಬಳಸಿಕೊಳ್ಳಲಾಗಿದೆ.

**ವಿಶ್ಲೇಷಣೆ ಮತ್ತು ಫಲಿತಾಂಶ ಅರ್ಥೈಸುವಿಕೆ**

**ಪ್ರಾಕಲ್ಪನೆ 1:** ಸ್ನಾತಕ ಪದವಿ ವಿದ್ಯಾರ್ಥಿಗಳಲ್ಲಿ ರಾ.ಸೆ.ಯೋ ಸ್ವಯಂಸೇವಕರು ಮತ್ತು ಸ್ವಯಂ ಸೇವಕರಲ್ಲದ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿಯ ಅಂಕಗಳಿಗೆ ಸಂಬಂಧಿಸಿದಂತೆ ಯಾವುದೇ ಮಹತ್ವ ಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ.

**ಕೋಷ್ಟಕ 1:** ಸ್ನಾತಕ ಪದವಿ ವಿದ್ಯಾರ್ಥಿಗಳಲ್ಲಿ ರಾ.ಸೇ.ಯೋ ಸ್ವಯಂ ಸೇವಕರು ಮತ್ತು ಸ್ವಯಂ ಸೇವಕರಲ್ಲದ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿಯ ಅಂಕಗಳ 'ಟಿ' ಪರೀಕ್ಷೆಯ ಫಲಿತಾಂಶ

| Groups ಗುಂಪುಗಳು | Mean ಸರಾಸರಿ | SD ಮಾನಕ ವಿಚಲನೆ | SE ಪ್ರಮಾಣಿತ ದೋಷ | t-value 'ಟಿ' ಮೌಲ್ಯ | P-value 'ಪಿ' ಮೌಲ್ಯ | Signi. ಮಹತ್ವ ಪೂರ್ಣತೆ |
|---|---|---|---|---|---|---|
| NSS Volunteers ಸ್ವಯಂ ಸೇವಕರು | 136.92 | 12.98 | 0.58 | 28.5691 | 0.0001 | ಖ |
| Non-volunteers ಸ್ವಯಂ ಸೇವಕೇತರ ವಿದ್ಯಾರ್ಥಿಗಳು | 113.92 | 12.47 | 0.56 | | | |

ಮೇಲಿನ ಕೋಷ್ಟಕದ ಫಲಿತಾಂಶದಿಂದ ತಿಳಿದುಬರುವುದೇನೆಂದರೆ ರಾ.ಸೇ. ಯೋಜನೆಯ ಸ್ವಯಂ ಸೇವಕರು ಮತ್ತು ಸ್ವಯಂ ಸೇವಕರಲ್ಲದ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿ ಅಂಕಗಳಲ್ಲಿ ಮಹತ್ವ ಪೂರ್ಣ ವ್ಯತ್ಯಾಸಕಂಡುಬರುತ್ತದೆ. ಆದ್ದರಿಂದ ಶೂನ್ಯ ಪ್ರಾಕಲ್ಪನೆಯನ್ನು ತಿರಸ್ಕರಿಸಲಾಗಿದೆ.ಅಂದರೆ ರಾ.ಸೇ. ಯೋಜನೆಯ ಸ್ವಯಂಸೇವಕರ ಸಾಮಾಜಿಕ ಅಭಿವೃತ್ತಿ (ಒ=136.92) ಸ್ವಯಂ ಸೇವಕರಲ್ಲದ ವಿದ್ಯಾರ್ಥಿಗಳಿಗಿಂತ (ಒ=113.92) ಹೆಚ್ಚಾಗಿರುವುದು ಕಂಡುಬರುತ್ತದೆ.

**ಪ್ರಾಕಲ್ಪನೆ 2: ಪುರುಷ ಮತ್ತು ಮಹಿಳಾ ಪದವಿ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಅಭಿವೃತ್ತಿ ಅಂಕಗಳಿಗೆ ಸಂಬಂಧಿಸಿದಂತೆ ಯಾವುದೇ ಮಹತ್ವ ಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ.**

**ಕೋಷ್ಟಕ 2:** ಪುರುಷ ಮತ್ತು ಮಹಿಳಾ ಸ್ನಾತಕ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ಥಿ ಅಂಕಗಳ 'ಟಿ' ಪರೀಕ್ಷೆಯ ಫಲಿತಾಂಶ

| Gender ಲಿಂಗ | Mean ಸರಾಸರಿ | SD ಮಾನಕ ವಿಚಲನೆ | SE ಪ್ರಮಾಣಿತ ದೋಷ | t-value 'ಟಿ' ಮೌಲ್ಯ | P-value ಪಿ ಮೌಲ್ಯ | Signi. ಮಹತ್ವ ಪೂರ್ಣತೆ |
|---|---|---|---|---|---|---|
| Male ಪುರುಷ | 124.55 | 18.07 | 0.81 | –1.6020 | 0.1095 | ಓಖ |
| Female ಮಹಿಳೆ | 126.29 | 16.16 | 0.72 | | | |

ಮೇಲಿನ ಕೋಷ್ಟಕದಿಂದ ತಿಳಿದುಬರುವಂತೆ ಪುರುಷ ಮತ್ತು ಮಹಿಳಾ ಸ್ನಾತಕ ಪದವಿ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿ ಅಂಕಗಳಲ್ಲಿ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ. ಅಂದರೆ ಪುರುಷ ಮತ್ತು ಮಹಿಳಾ ಸ್ನಾತಕ ಪದವಿ ವಿದ್ಯಾರ್ಥಿಗಳು ಸಮಾನವಾದ ಸಾಮಾಜಿಕ ಅಭಿವೃತ್ತಿ ಅಂಕಗಳನ್ನು ಪಡೆದಿರುತ್ತಾರೆ.

**ಪ್ರಾಕಲ್ಪನೆ 3: ಗ್ರಾಮೀಣ ಮತ್ತು ನಗರ ಪ್ರದೇಶದ ಸ್ನಾತಕ ಪದವಿ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿ ಅಂಕಗಳ ನಡುವೆ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ.**

**ಕೋಷ್ಟಕ 3:** ಗ್ರಾಮೀಣ ಮತ್ತು ನಗರ ಪ್ರದೇಶದ ಸ್ನಾತಕ ಪದವಿ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿ ಅಂಕಗಳ 'ಟಿ' ಪರೀಕ್ಷೆಯ ಫಲಿತಾಂಶ

| Location ಪ್ರದೇಶ | Mean ಸರಾಸರಿ | SD ಮಾನಕ ವಿಚಲನೆ | SE ಪ್ರಮಾಣಿತ ದೋಷ | t-value 'ಟಿ' ಮೌಲ್ಯ | P-value ಪಿ ಮೌಲ್ಯ | Signi. ಮಹತ್ವ ಪೂರ್ಣತೆ |
|---|---|---|---|---|---|---|
| Rural ಗ್ರಾಮೀಣ | 123.28 | 16.50 | 0.74 | –3.9893 | 0.0001 | ಖ |
| Urban ನಗರ | 127.57 | 17.54 | 0.78 | | | |

ಮೇಲಿನ ಕೋಷ್ಟಕದ ಫಲಿತಾಂಶದಿಂದ ತಿಳಿದುಬರುವುದೇನೆಂದರೆ ಗ್ರಾಮೀಣ ಮತ್ತು ನಗರದ ಪ್ರದೇಶದ ಸ್ನಾತಕ ಪದವಿ ವಿದ್ಯಾರ್ಥಿಗಳ ನಡುವೆ ಸಾಮಾಜಿಕ ಅಭಿವೃತ್ತಿ ಅಂಕಗಳಲ್ಲಿ ಗಮನಾರ್ಹ ವ್ಯತ್ಯಾಸ ಕಂಡುಬಂದಿದೆ.ಅದ್ದರಿಂದ ಶೂನ್ಯಪ್ರಾಕಲ್ಪನೆಯನ್ನು ತಿರಸ್ಕರಿಸಲಾಗಿದೆ.ಅಂದರೆ ನಗರದ ಪ್ರದೇಶದ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಸಾಮಾಜಿಕ ಅಭಿವೃತ್ತಿ ಹೊಂದಿರುತ್ತಾರೆ.

**ಪ್ರಾಕಲ್ಪನೆ 4: ಅನುದಾನಿತ, ಅನುದಾನ ರಹಿತ ಮತ್ತು ಸರಕಾರಿ ಕಾಲೇಜುಗಳ ಸ್ನಾತಕ ಪದವಿ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿ ಅಂಕಗಳ ನಡುವೆ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ.**

**ಕೋಷ್ಟಕ 4:** ಅನುದಾನಿತ, ಅನುದಾನ ರಹಿತ ಮತ್ತು ಸರಕಾರಿ ಕಾಲೇಜುಗಳ ಸ್ನಾತಕ ಪದವಿ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿ ಅಂಕಗಳಿಗೆ ಸಂಬಂಧಿಸಿದಂತೆ ಅನೋವಾ ಪರೀಕ್ಷೆಯ ಫಲಿತಾಂಶ

| Sources of variation ಭಿನ್ನತೆಯ ಮೂಲ | Degrees of freedom ಸ್ವತಂತ್ರ್ಯತೆಯ ಮಟ್ಟ | Sum of squares ವರ್ಗಗಳ ಮೊತ್ತ | Mean sum of squares ವರ್ಗಗಳ ಮೊತ್ತದ ಸರಾಸರಿ | F-value ಎಫ್ ಮೌಲ್ಯ | p-value ಪಿ–ಮೌಲ್ಯ | Signi. ಮಹತ್ವ ಪೂರ್ಣತೆ |
|---|---|---|---|---|---|---|
| Between managements ಕಾಲೇಜು ಆಡಳಿತ ನಿರ್ವಹಣಾ ವಿಧಗಳ ನಡುವೆ | 2 | 85587.78 | 42793.8 | 204.758 | 0.0001 | ಖ |
| Within managements ಕಾಲೇಜು ಆಡಳಿತ ನಿರ್ವಹಣಾ ವಿಧಗಳ ಒಳಗೆ | 997 | 208370.44 | 209.00 | | | |
| Total ಒಟ್ಟು | 999 | 293958.22 | | | | |

ಮೇಲಿನ ಕೋಷ್ಟಕದ ಫಲಿತಾಂಶಗಳಿಂದ ತಿಳಿದುಬರುವುದೇನೆಂದರೆ. ಸ್ನಾತಕ ಪದವಿ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿ ಅಂಕಗಳಲ್ಲಿ ಮಹತ್ವಪೂರ್ಣ ವ್ಯತ್ಯಾಸ (ಈ=204.758, ಕ<0.05) ಕಂಡುಬಂದಿದೆ. ಅದ್ದರಿಂದ ಶೂನ್ಯ ಪ್ರಾಕಲ್ಪನೆಯನ್ನು ತಿರಸ್ಕರಿಸಲಾಗಿದೆ.ಅಂದರೆ ಅನುದಾನಿತ, ಅನುದಾನ ರಹಿತ ಮತ್ತು ಸರಕಾರಿ ಕಾಲೇಜಿನ ಸ್ನಾತಕ ಪದವಿ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿ ಅಂಕಗಳು ಭಿನ್ನವಾಗಿರುವುದು ಕಂಡುಬರುತ್ತದೆ. ವಿವಿಧ ಗುಂಪುಗಳ ಜೋಡಿ ಹೋಲಿಕೆಗಾಗಿ ಖಿಣಇಜಥಿ ಒಣಟಣಖಿಟಜ ಕಥಿಣಖುಂಥಿ ಕಡಿಂಥಿಜಜಣಡಿಜ ಬಳಸಿಕೊಳ್ಳಲಾಗಿದೆ.

**ಕೋಷ್ಟಕ 5:** ಅನುದಾನಿತ, ಅನುದಾನ ರಹಿತ ಮತ್ತು ಸರಕಾರಿ ಕಾಲೇಜುಗಳ ಸ್ನಾತಕ ಪದವಿ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿ ಅಂಕಗಳ ಜೋಡಿ ಹೋಲಿಕೆಯ ಕೋಷ್ಟಕ

| Management ಆಡಳಿತ ನಿರ್ವಹಣಾ ವಿಧಗಳು | Aided ಅನುದಾನಿತ | Unaided ಅನುದಾನ ರಹಿತ | Government ಸರಕಾರಿ |
|---|---|---|---|
| Meanಸರಾಸರಿ | 132.98 | 131.32 | 112.77 |
| SDಮಾನಕ ವಿಚಲನೆ | 19.64 | 10.56 | 11.59 |
| AidedCನುದಾನಿತ | – | ಠಿ=0.3044 | ಠಿ=0.0001* |
| Unaidedಅನುದಾನ ರಹಿತ | ಠಿ=0.3044 | – | ಠಿ=0.0001* |
| Governmentಸರಕಾರಿ | ಠಿ=0.0001* | ಠಿ=0.0001* | – |

ಈ ಮೇಲಿನ ಕೋಷ್ಟಕ ಫಲಿತಾಂಶಗಳಿಂದ ಸ್ಪಷ್ಟವಾಗಿ ತಿಳಿದುಬರುವುದೇನೆಂದರೆ, ಅನುದಾನಿತ ಮತ್ತು ಅನುದಾನ ರಹಿತ ಕಾಲೇಜಿನ ಸ್ನಾತಕ ಪದವಿ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿ ಅಂಕಗಳು ಸಮಾನವಾಗಿರುವುದು ಕಂಡುಬರುತ್ತದೆ.ಅನುದಾನಿತ ಮತ್ತು ಸರಕಾರಿ ಕಾಲೇಜುಗಳ ಸ್ನಾತಕ ಪದವಿ ವಿದ್ಯಾರ್ಥಿಗಳಲ್ಲಿ ಅನುದಾನಿತ ಕಾಲೇಜು ವಿದ್ಯಾರ್ಥಿಗಳು ಸರಕಾರಿ ಕಾಲೇಜಿನ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಸಾಮಾಜಿಕ ಅಭಿವೃತ್ತಿ ಅಂಕಗಳನ್ನು ಪಡೆದುಕೊಂಡಿದ್ದಾರೆ.

ಸರಕಾರಿ ಮತ್ತು ಅನುದಾನ ರಹಿತ ಕಾಲೇಜುಗಳ ಸ್ನಾತಕ ಪದವಿ ವಿದ್ಯಾರ್ಥಿಗಳಲ್ಲಿ ಅನುದಾನ ರಹಿತ ಕಾಲೇಜಿನ ವಿದ್ಯಾರ್ಥಿಗಳು ಸರಕಾರಿ ಕಾಲೇಜು ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಸಾಮಾಜಿಕ ಅಭಿವೃತ್ತಿ ಅಂಕಗಳನ್ನು ಪಡೆದುಕೊಂಡಿದ್ದಾರೆ.

**ಅಧ್ಯಯನದ ಫಲಿತಾಂಶಗಳು**

1. ಸ್ನಾತಕ ಪದವಿ ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕರು ಸ್ವಯಂಸೇವಕರಲ್ಲದ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಸಾಮಾಜಿಕ ಅಭಿವೃತ್ತಿ ಹೊಂದಿರುತ್ತಾರೆ.
2. ಮಹಿಳಾ ಮತ್ತು ಪುರುಷ ಸ್ನಾತಕ ಪದವಿ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿ ಅಂಕಗಳಲ್ಲಿ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ. ಅಂದರೆ ಎರಡೂ ಗುಂಪಿನ ವಿದ್ಯಾರ್ಥಿಗಳು ಸಮಾನವಾದ ಸಾಮಾಜಿಕ ಅಭಿವೃತ್ತಿ ಹೊಂದಿರುತ್ತಾರೆ.
3. ನಗರ ಪ್ರದೇಶದ ಸ್ನಾತಕ ಪದವಿ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಸಾಮಾಜಿಕ ಅಭಿವೃತ್ತಿ ಹೊಂದಿರುತ್ತಾರೆ.
4. ಅನುದಾನಿತ, ಅನುದಾನರಹಿತ ಹಾಗೂ ಸರಕಾರಿ ಕಾಲೇಜುಗಳ ಸ್ನಾತಕ ಪದವಿ ವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿ ಅಂಕಗಳಲ್ಲಿ ವ್ಯತ್ಯಾಸವಿರುವುದು ಕಂಡುಬಂದಿದೆ. ಜೋಡಿ ಗುಂಪುಗಳ ಹೋಲಿಕೆಯಲ್ಲಿ.

- ಅನುದಾನಿತ ಹಾಗೂ ಅನುದಾನ ರಹಿತ ಕಾಲೇಜುಗಳ ಸ್ನಾತಕ ಪದವಿವಿದ್ಯಾರ್ಥಿಗಳ ಸಾಮಾಜಿಕ ಅಭಿವೃತ್ತಿ ಅಂಕಗಳು ಸಮನಾಗಿರುವುದು ಕಂಡುಬರುತ್ತದೆ.
- ಅನುದಾನಿತ ಮತ್ತು ಸರಕಾರಿ ಕಾಲೇಜುಗಳ ಸ್ನಾತಕ ಪದವಿ

ವಿದ್ಯಾರ್ಥಿಗಳಲ್ಲಿ ಅನುದಾನಿತ ಕಾಲೇಜು ವಿದ್ಯಾರ್ಥಿಗಳು ಸರಕಾರಿ ಕಾಲೇಜಿನ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಸಾಮಾಜಿಕ ಅಭಿವೃತ್ತಿ ಅಂಕ ಹೊಂದಿರುತ್ತಾರೆ.

- ಸರಕಾರಿ ಮತ್ತು ಅನುದಾನ ರಹಿತ ಕಾಲೇಜು ವಿದ್ಯಾರ್ಥಿಗಳಲ್ಲಿ ಅನುದಾನ ರಹಿತ ಕಾಲೇಜಿನ ವಿದ್ಯಾರ್ಥಿಗಳು ಸರಕಾರಿ ಕಾಲೇಜಿನ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಸಾಮಾಜಿಕ ಅಭಿವೃತ್ತಿ ಅಂಕಗಳನ್ನು ಹೊಂದಿರುತ್ತಾರೆ.

### ತೀರ್ಮಾನ

1. ಸ್ನಾತಕ ಪದವಿ ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕರು ಹೆಚ್ಚಿನ ಸಾಮಾಜಿಕ ಅಭಿವೃತ್ತಿ ಹೊಂದಿರುತ್ತಾರೆ. ಅದ್ದರಿಂದ ರಾ.ಸೇ. ಯೋಜನೆಯಲ್ಲಿರುವ ವಿದ್ಯಾರ್ಥಿಗಳು ಸ್ವಯಂ ಪ್ರೇರಿತರಾಗಿ ಸಾಮಾಜಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

### ಶೈಕ್ಷಣಿಕ ನಿಹಿತಾರ್ಥಗಳು

1. ರಾಷ್ಟ್ರೀಯ ಸೇವಾ ಯೋಜನೆಯಲ್ಲಿರುವ ಸ್ವಯಂಸೇವಕರು ಹೆಚ್ಚಿನ ಸಾಮಾಜಿಕ ಅಭಿವೃತ್ತಿ ಹೊಂದಿರುವುದರಿಂದ ಸಾಮಾಜಿಕ ಚಟುವಟಿಕೆಗಳು ಹಾಗೂ ಸಮುದಾಯದ ಚಟುವಟಿಕೆಗಳಲ್ಲಿ ಸ್ವಯಂ ಪ್ರೇರಿತವಾಗಿ ಪಾಲ್ಗೊಳ್ಳುತ್ತಾರೆ. ಸ್ವಯಂ ಸೇವಕರಲ್ಲದ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಅಭಿವೃತ್ತಿ ಕಡಿಮೆಯಿರುವುದರಿಂದ ಸಾಮಾಜಿಕ ಚಟುವಟಿಕೆಗಳಲ್ಲಿ ಹೆಚ್ಚಾಗಿ ಪಾಲ್ಗೊಳ್ಳುತ್ತಿಲ್ಲ. ಅದ್ದರಿಂದ ಪದವಿ ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳು ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಬೇಕು. ಇವರು ಸಮುದಾಯದೊಡನೆ ಬೆರೆಯಲು ಅವಕಾಶ ಕಲ್ಪಿಸಬೇಕು.
2. ನಗರ ಪ್ರದೇಶದ ಸ್ನಾತಕ ಪದವಿ ವಿದ್ಯಾರ್ಥಿಗಳಲ್ಲಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗಿಂತ ಸಾಮಾಜಿಕ ಅಭಿವೃತ್ತಿ ಉತ್ತಮವಾಗಿರುವುದು ಕಂಡುಬರುತ್ತದೆ. ಇದಕ್ಕೆ ಕಾರಣ ನಗರ ಪ್ರದೇಶದ ಶಾಲಾ ಕಾಲೇಜುಗಳಲ್ಲಿ ಸಾಮಾಜಿಕ ಸಂಘ ಸಂಸ್ಥೆಗಳಲ್ಲಿ ಪಾಲ್ಗೊಳ್ಳಲು ಹೆಚ್ಚಿನ ಅವಕಾಶ ದೊರೆಯುತ್ತದೆ. ಅದ್ದರಿಂದ ಅವರ ಸಾಮಾಜಿಕ ಅಭಿವೃತ್ತಿ ಉತ್ತಮವಾಗಿದೆ. ಗ್ರಾಮೀಣ ಪ್ರದೇಶದಿಂದ ಕಾಲೇಜಿಗೆ ಬರುವ ವಿದ್ಯಾರ್ಥಿಗಳನ್ನು ರಾ.ಸೇ. ಯೋಜನೆಯಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳುವಂತೆ ಮಾಡುವುದರಿಂದ ಅವರ ಸಾಮಾಜಿಕ ಅಭಿವೃತ್ತಿಯನ್ನು ಹೆಚ್ಚಿಸಬಹುದಾಗಿದೆ.
3. ಅನುದಾನಿತ ಹಾಗೂ ಅನುದಾನ ರಹಿತ ಕಾಲೇಜಿನ ವಿದ್ಯಾರ್ಥಿಗಳು ಸರಕಾರಿ ಕಾಲೇಜಿನ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಸಾಮಾಜಿಕ ಅಭಿವೃತ್ತಿ ಹೊಂದಿರುವುದು ಕಂಡುಬರುತ್ತದೆ. ಅದ್ದರಿಂದ ಸರಕಾರಿ ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಿರುವ ಪದವಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ರಾ.ಸೇ. ಯೋಜನೆಯಲ್ಲಿ ಪಾಲ್ಗೊಳ್ಳುವಂತೆ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಅವಕಾಶ ನೀಡುವುದರಿಂದ ಅವರ ಸಾಮಾಜಿಕ ಅಭಿವೃತ್ತಿಯನ್ನು ಹೆಚ್ಚಿಸಬಹುದಾಗಿದೆ.

### ಗ್ರಂಥಾವಲೋಕನ


1. Siddu K.S. (1987). Methodology of Research in Education, Sterling Publishers Pvt. Ltd., New Delhi.
2. Nanda V.K. (2008). Environmental Education, Anmol Publication Pvt. Ltd., New Delhi.
3. Koul Lokesh (1997) Methodology of Educational Research, Vikas Publishing House Pvt. Ltd., Himachal Pradesh.
4. Dilshad M.B. (2008). National service Scheme in India, Chetana Books, Bangalore.
5. Nagabhushana H.S. (2001) Value orientation in NSS – A Comparitive study.
6. Nitin Ghorpade, Administration and Management of National service Scheme.
7. ಗೋಪಾಲ ಎಂ.ಎ. (2010) "ಸೇವೆಯೆಂಬ ಸವಿಜೇನು – ರಾಷ್ಟ್ರೀಯ ಸೇವಾ ಯೋಜನೆ", ಗುರುಕೃಪಾ ಪ್ರಕಾಶಕರು.
8. National Service Scheme Manual, Govt. of India, New Delhi.
9. National Service Scheme Manual (1998), Karnataka NSS State Laision clel department of Information, Tourism and youth affairs, Govt. of Karnataka.
10. ಶಿವಣ್ಣ ಬಿ.ಕೆ. (2009) ರಾಷ್ಟ್ರೀಯ ಸೇವಾ ಯೋಜನೆ – ಒಳನೋಟ, ಚಿಂತನೆ, ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.
11. ಯಶೋಧರ. ಕೆ. (2011). ಶಿಕ್ಷಣದಲ್ಲಿ ಸಂಖ್ಯಾಶಾಸ್ತ್ರ, ಶಿಲಾ ಪ್ರಕಾಶನ, ಮೈಸೂರು.